ಸುಧಾ

ವಜ್ರ ಮಹೋತ್ಸವ 60

## ಬಾಳಿಗೆ ಸಿಕ್ಕ ಬಾಗಿನ 'ಸುಧಾ'

1962, ಭಾರತ–ಚೀನಾ ಯುದ್ಧದ ಸಮಯದಲ್ಲಿ ಸ್ವಯಂಸೇವಕರ ಘೋಷಣೆ, ರೇಡಿಯೊದಲ್ಲಿ ನೆಹರೂರವರ ಭಾಷಣಗಳಿಂದ ಪ್ರೇರಿತಳಾಗಿ ಕವಿತೆ ಬರೆದಿದ್ದೆ. ಆಗ ನನಗೆ 10 ವರ್ಷ. ಒಂದೆರಡು ವರ್ಷಗಳ ತರುವಾಯ, ಅದು ಪತ್ರಿಕೆಯಲ್ಲಿ ಪ್ರಕಟವಾಗಬೇಕು, ನನ್ನ ಹೆಸರು ಕಾಣಬೇಕೆನ್ನುವ ತೀವ್ರ ಆಸೆ ಹೊತ್ತಿತು. ಆದರೆ, ನನ್ನೂರು ಚಿಕ್ಕ ಟೌನು, ನರಸಿಂಹರಾಜಪುರ. ಕೆಲವೇ ಮನೆಗಳಲ್ಲಿ ದಿನಪತ್ರಿಕೆ, ವಾರಪತ್ರಿಕೆ ತರಿಸುತ್ತಿದ್ದ ಕಾಲ. ಮ್ಯಾಗಝೀನ್ ಓದುವ ತಹತಹ. ಆದರೆ, ಸಿಗುತ್ತಿರಲಿಲ್ಲ.

ಮುಂದೆ 1965 ಇರಬಹುದು– 'ಸುಧಾ' ಎನ್ನುವ ವಾರಪತ್ರಿಕೆ ಮಾರುಕಟ್ಟೆಗೆ ಬಂದಿದೆ ಎನ್ನುವ ಸುದ್ದಿ ಕಿವಿಗೆ ಬಿತ್ತು. 'ಸುಧಾ' ಹೆಸರೇ ಮೊದಲಿಗೆ ಸೆಳೆಯಿತು. ಆದರೆ, ಪತ್ರಿಕೆ ಕಂಡಿರಲಿಲ್ಲ. ಪತ್ರಿಕೆಗಳಿಗೆ ಏನಾದರೂ ಬರೆದು ಪ್ರಕಟವಾಗಬೇಕಾದರೆ, ಸದಸ್ಯತ್ವ ಪಡೆದಿರಬೇಕು ಎನ್ನುವುದು ತಿಳಿಯಿತು. ಕಷ್ಟಪಟ್ಟು ಹುಡುಕಿ ವಿಳಾಸ ಸಂಪಾದಿಸಿ ನನ್ನ ವಿವರ ಬರೆದು ಕಳಿಸಿದೆ. ಆದರೆ, ಮುಂದೆ ಪತ್ರಿಕೆಗಳಿಲ್ಲದೆ ನನಗೆ ಸದಸ್ಯತ್ವ ಸಿಕ್ಕಿದೆ ಎಂದು ತಿಳಿಯುವುದಾದರೂ ಹೇಗೆ? ದಾರಿಗಾಣದೆ ಮರೆತುಬಿಟ್ಟೆ.

ಕೆಲವು ತಿಂಗಳ ನಂತರ ನನ್ನಕ್ಕನೊಡನೆ ಸಂಬಂಧಿಕರ ಮನೆಗೆ ಹೋದಾಗ, ಪಡಸಾಲೆಯ ಕುರ್ಚಿಯಲ್ಲಿ ಕಂಡಿದ್ದು 'ಸುಧಾ'. ಪತ್ರಿಕೆ ಕಂಡಿದ್ದೇ ಭಾಗ್ಯವೆನ್ನುವಂತೆ ಪುಟ ತೆರೆದರೆ, ಅಲ್ಲಿತ್ತು ಸದಸ್ಯರ ಸಂಖ್ಯೆಯ ಪಟ್ಟಿಯಲ್ಲಿ ನನ್ನ ಹೆಸರು. ಎದೆಬಡಿತ ಜೋರಾಯ್ತು, ಹೆಸರು ಕಂಡು.

'ಸಂಖ್ಯೆ 13561 ಎಸ್.ಪಿ. ವಿಜಯಲಕ್ಷ್ಮಿ, ನರಸಿಂಹರಾಜಪುರ'. ಅಷ್ಟಕ್ಕೇ ಲೇಖಕಿಯಾದೆ ಎನ್ನುವಷ್ಟು ಸಂಭ್ರಮ. ಆಗಾಗ ಹೆಸರಿನ ಮೇಲೆ ಬೆರಳುಗಳಿಂದ ನೇವರಿಸಿ, 'ಸುಧಾ'ದಲ್ಲಿ ಒಂದಾದರೂ ಲೇಖನ ಬರೆದು ಲೇಖಕಿಯಾಗಲೇಬೇಕೆನ್ನುವ ಕನಸು ಹೊತ್ತಿಸಿಕೊಂಡುಬಿಟ್ಟೆ ಅಂದೇ, ಆಗ ನನಗೆ 13 ವಯಸ್ಸು!

ವರ್ಷಗಳು ಕಳೆದವು. ಕನಸು ಗುಪ್ತಗಾಮಿನಿಯಂತೆ ಬಯಕೆಯ ಜಿನುಗನ್ನು ಆರ್ದ್ರವಾಗಿರಿಸಿತ್ತು. ಸಾಂಸಾರಿಕ ಹೊಣೆಗಾರಿಕೆಯಲ್ಲಿ ಕನಸು ಮುದುಡಿದ್ದರೂ, ಸೆಲೆ ಒಣಗಿರಲಿಲ್ಲ. 'ಸುಧಾ' ಪತ್ರಿಕೆಯನ್ನು ಬಿಡದಂತೆ ಓದಿ ಆಸ್ವಾದಿಸುತ್ತಿದ್ದೆನಾದ್ದರೂ ಬರವಣಿಗೆಗೆ ಇಳಿದಿದ್ದೇ 55ನೇ ವಯಸ್ಸಿನಲ್ಲಿ. 13ರಲ್ಲಿ ಕಂಡ ಕನಸು ನನ್ನ 55ನೇ ವಯಸ್ಸಿನಲ್ಲಿ ನನಸಾಗಿಯೇಬಿಟ್ಟಿತು.

ಮುಂದೆ 'ಸುಧಾ'ಗೆ ಹಲವು ಪ್ರವಾಸ ಲೇಖನಗಳನ್ನು ಬರೆದೆ. ಕಥೆ, ಲೇಖನಗಳನ್ನೂ ಬರೆದೆ, ಇಂದೂ ಆಗಾಗ! ಎಲ್ಲ ಪತ್ರಿಕೆಗಳಿಗೂ ಬರೆದು, ಪುಸ್ತಕಗಳನ್ನು ಪ್ರಕಟಿಸಿದೆ. ಇದಕ್ಕೆಲ್ಲ ಮೂಲ, 13ನೇ ವಯಸ್ಸಿನಲ್ಲಿ ಕಂಡ 'ಸುಧಾ' ಪತ್ರಿಕೆಯ ಆ ಒಂದು ತುಣುಕು, ಅದರಲ್ಲಿನ ನನ್ನ ಹೆಸರು. 'ಸುಧಾ'ಳ ಈ ಕೊಡುಗೆ ನನ್ನ ಬಾಳಿಗೆ ಸಿಕ್ಕ ತಾಯಿಬಾಗಿನ. ಬಾಳಿಗೊಂದು ದಿಕ್ಕು ತೋರಿಸಿ ಅದನ್ನು ಹಿಂಬಾಲಿಸುವ ಪ್ರೇರಣೆ ಕೊಟ್ಟು ಬೆಳೆಸಿದ್ದಕ್ಕೆ 'ಸುಧಾ'ಗೆ ವಂದನೆ.

—ಎಸ್.ಪಿ. ವಿಜಯಲಕ್ಷ್ಮಿ, ಬೆಂಗಳೂರು

### ಮತ್ತೆ ಸಿಕ್ಕಿತು 'ಸುಧಾ' ಸಾಂಗತ್ಯ

'ಸುಧಾ' ಶುರುವಾದಾಗ ನಾನು ಹೈಸ್ಕೂಲ್ ವಿದ್ಯಾರ್ಥಿ. ಸಾಗರದಿಂದ 5 ಕಿ.ಮೀ. ದೂರ ನಮ್ಮೂರು. ಪ್ರತಿದಿನ ಶಾಲೆ ಬಿಟ್ಟ ಬಳಿಕ ಅಂಗಡಿಯಿಂದ 'ಪ್ರಜಾವಾಣಿ' ಖರೀದಿಸಿ ಊರಿಗೆ ಬರುತ್ತಿದ್ದೆ. ಹೀಗೆ ಒಮ್ಮೆ 'ಪ್ರಜಾವಾಣಿ'ಯಲ್ಲಿ 'ಸುಧಾ' ಪತ್ರಿಕೆ ಆರಂಭವಾಗುವ ಸುದ್ದಿ ಇತ್ತು. ನನ್ನ ಚಿಕ್ಕಪ್ಪ ಆ ವಾರವೇ ತರಲು ಹೇಳಿದರು. ಸಂಜೆ 'ಸುಧಾ' ಖರೀದಿಸಿ ಊರಿನ ದಾರಿ ಹಿಡಿದೆ.

ಸಾಗರದಿಂದ ಮನೆವರೆಗೂ ಮುಖಪುಟದಿಂದ ಕೊನೇ ಪುಟದವರೆಗೆ ನೋಡ್ತಾನೇ, ಓದ್ತಾನೆ ಬಂದೆ. ಮನೆ ತಲುಪುವಾಗ ಅರ್ಧ ಗಂಟೆ ತಡವಾಗಿತ್ತು. ಅಲ್ಲಿಂದ ಪ್ರಾರಂಭವಾದ ನನ್ನ, 'ಸುಧಾ'ಳ ಗೆಳೆತನ ಇಂದಿಗೂ ಮುಂದುವರೆದಿದೆ. ನಾನು ಬ್ಯಾಂಕಿನಲ್ಲಿ ಉದ್ಯೋಗ ಮಾಡುತ್ತಿದ್ದಾಗ ಸಾಕಷ್ಟು ಲೇಖನ, ಕವನಗಳನ್ನು ಬರೆದಿದ್ದೆ. ಕೆಲಸದ ನಿಮಿತ್ತ ಹೊರ ರಾಜ್ಯಕ್ಕೆ ಹೋದಾಗ 'ಸುಧಾ'ಳ ಸಂಪರ್ಕ ಕಡಿದಿತ್ತು. ಈಗ ನಾನು ನಿವೃತ್ತ, ಹಾಗಾಗಿ ಮತ್ತೆ 'ಸುಧಾ'ಳ ಗೆಳೆತನ ಮುಂದುವರೆದಿದೆ. ವಯಸ್ಸಿನಲ್ಲಿ ಹಿರಿಯ ನಾಗರಿಕಳಾದರೂ ಇನ್ನೂ ಹದಿಹರೆಯದ ಸುಂದರಿಯಂತಿದ್ದಾಳೆ. ಹೀಗೆಯೇ ಸದಾ ಕಾಲ ನಳನಳಿಸುತ್ತಿರಲಿ 'ಸುಧಾ'.

—ಗಣಪತಿ ಮೇಲಿನಮನೆ, ಶಿವಮೊಗ್ಗ

### ಪುಳಕಗೊಂಡ ಆ ಕ್ಷಣ

'ಸುಧಾ' ನನ್ನ ನೆಚ್ಚಿನ ವಾರಪತ್ರಿಕೆ. ಪತ್ರಿಕೆಯನ್ನು ಹಿಂದಿನ ಪುಟದಿಂದ ಓದುವುದು ನನ್ನ ವಾಡಿಕೆ. ಸಿನಿಮಾ ಸುದ್ದಿ ಮೇಲೆ ಮೊದಲು ಕಣ್ಣಾಡಿಸಿ ಬೇರೆ ಪುಟಗಳನ್ನು ಓದುವುದು. ಪದಬಂಧ ತುಂಬಿಸುವುದು ನನ್ನ ನೆಚ್ಚಿನ ಅಭ್ಯಾಸ. ಮೊದಲ ಬಾರಿ ನನ್ನ ಹೆಸರನ್ನು 'ಸಮುದ್ರಮಥನ'ದಲ್ಲಿ ಕಂಡು ಪುಳಕಿತಳಾಗಿದ್ದೆ. ಪ್ರತಿ ಗುರುವಾರವೂ 'ಸುಧಾ'ಗೆ ಕಾಯುತಿರುತ್ತೇನೆ.

—ಡಾ. ಶೀಲಾ, ಬೆಂಗಳೂರು

## 'ಸುಧಾ' ಜೊತೆಗಿನ ಓದುಗರ ಒಡನಾಟ

### ಸುಧಾಮೃತ!

ಅಮೃತದಂಥ ವಿಚಾರಧಾರೆಗಳನ್ನು ಓದುಗರ ಮನಮುಟ್ಟುವಂತೆ ತಿಳಿಸುವ, ಹಿರಿಕಿರಿಯರೆಲ್ಲರ ಜ್ಞಾನ ಭಂಡಾರವನ್ನು ವರ್ಧಿಸುವ, ಅಬಾಲವೃದ್ಧರಾದಿಯಾಗಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿರುವ 'ಸುಧಾ' ನಿನಗಿದೋ ಸಹಸ್ರ ನಮನ.

—ಆನಂದಿ, ದಕ್ಷಿಣ ಕನ್ನಡ

### ವೈವಿಧ್ಯಗಳ ದರ್ಶನ

ಸುಮಾರು 30 ವರ್ಷಗಳ ಬಾಂಧವ್ಯ ನನ್ನ ಹಾಗೂ 'ಸುಧಾ' ಪತ್ರಿಕೆಯದ್ದು.

'ಸುಧಾ'ದಲ್ಲಿ ಪ್ರಕಟಗೊಳ್ಳುತ್ತಿದ್ದ ಕೆಲವು ಧಾರಾವಾಹಿಗಳು ನನ್ನ ಮನಸ್ಸಿಗೆ ಬಹಳ ಆನಂದ ನೀಡಿವೆ. ಅವನ್ನು ಸಂಗ್ರಹಿಸುವಂತೆ ಮಾಡಿವೆ ಕೂಡ. ಕೆಲವು ಧಾರಾವಾಹಿಗಳು ಇತರ ದೇಶಗಳ ಸಾಮಾಜಿಕ ಜೀವನ, ಜನರ ನಡವಳಿಕೆಗಳು, ವೃತ್ತಿ, ಸರ್ಕಾರ, ಕಾನೂನು, ಅಲ್ಲಿನ ವ್ಯವಸ್ಥೆಗಳ ಕುರಿತಂತೆ ಸಂಪೂರ್ಣ ದರ್ಶನವನ್ನು ಮಾಡಿಸಿವೆ.

—ವಿ. ವಾಸುದೇವ, ಮೈಸೂರು

### ಓದು ತಂದ ಆನಂದ

ನಾನು ಖಾಸಗಿ ಕಂಪನಿಯೊಂದರಲ್ಲಿ ಎಂಜಿನಿಯರ್. 'ಸುಧಾ'ದೊಂದಿಗಿನ ನನ್ನ ನೆನಪು ಹೊರಳುವುದು ಹೈಸ್ಕೂಲ್ ಸಮಯದಲ್ಲಿ. ಆಗ 'ಸುಧಾ' ಪತ್ರಿಕೆಯ ಓದುಗರ ಅಂಕಣದಲ್ಲಿ ಪ್ರಕಟವಾಗುತ್ತಿದ್ದ ನನ್ನ ಅಮ್ಮನ ಬರಹಗಳನ್ನು ನೋಡಿ ಖುಷಿಪಡುತ್ತಿದ್ದೆ. ನಂತರ ಕಾಲೇಜಿನ ದಿನಗಳಲ್ಲಿ ನಾನೂ 'ಸುಧಾ' ಓದಲು ಪ್ರಾರಂಭಿಸಿದೆ. ಇಂದಿನವರೆಗೂ ಆ ಓದು ಗಟ್ಟಿಯಾದ ನಂಟನ್ನು ಬೆಸೆಯುತ್ತಾ ಸಾಗಿದೆ. ನೆಚ್ಚಿನ 'ಸುಧಾ' ಚಿರಂಜೀವಿಯಾಗಲಿ.

—ಎಂ.ಜೆ. ಅಭಿಷೇಕ್, ಬೆಂಗಳೂರು